# ವ್ಯಾಪಾರಿ ಮತ್ತು ಮೀನುಗಾರ



ಒಂದು ನಗರದಲ್ಲಿ ಒಬ್ಬ ವ್ಯಾಪಾರಿಯಿದ್ದ. ಅವನಲ್ಲಿ ಹೇರಳವಾದ ನಗ ನಾಣ್ಯಗಳಿದ್ದವು. ಆದರೆ ಅದೆಲ್ಲವೂ ಅಮಾಯಕ ಜನರಿಗೆ ಮೋಸ ಮಾಡಿ ಗಳಿಸಿದ ಸಂಪತ್ತು. ಸಿರಿತನ ತುಂಬಿದಷ್ಟೂ ಅವನಿಗೆ ಇನ್ನೂ ಬೇಕು ಎಂಬ ಆಶೆ ಹೆಚ್ಚುತ್ತ ಹೋಯಿತು. ತನ್ನ ಬಳಿಗೆ ಯಾರಾದರೂ ಸಹಾಯ ಕೇಳಿಕೊಂಡು ಬಂದರೆ ಅವರನ್ನು ಉಡದಂತೆ ಹಿಡಿಯುತ್ತಿದ್ದ. ಸಹಾಯ ಮಾಡಿದ ಪ್ರತಿಫಲವಾಗಿ ಅವರಲ್ಲಿ ಇರುವುದೆಲ್ಲವನ್ನೂ ವಶಪಡಿಸಿಕೊಂಡು ಬೀದಿಗೆ ಸೇರಿಸದೆ ಬಿಡುತ್ತಿರಲಿಲ್ಲ.

ಅಲ್ಲೊಬ್ಬ ಮೀನುಗಾರನಿದ್ದ. ಅವನು ಪುಟ್ಟ ಜಲಾಶಯಗಳಿಗೆ ಬಲೆ ಬೀಸಿ ಮೀನು ಹಿಡಿದು ಮಾರಾಟ ಮಾಡಿ ಬಂದ ಸಂಪಾದನೆಯಿಂದ ಜೀವನ ಸಾಗಿಸುತ್ತಿದ್ದ. ಹೀಗೆ ದುಡಿದು ತಂದುದರಲ್ಲಿ ಮರುದಿನಕ್ಕೆ ಏನೂ ಉಳಿಯುತ್ತಿರಲಿಲ್ಲ. ಇದರಿಂದಾಗಿ ದಿನವೂ ದುಡಿಯಲು ಹೋಗದೆ ವಿಧಿಯಿರಲಿಲ್ಲ. ಅವನಿಗೆ ವಯಸ್ಸಿಗೆ ಬಂದ ಮಗಳಿದ್ದಳು. ಅವಳಿಗೆ ಮದುವೆ ಮಾಡಲು ಏನಾದರೂ ಸಹಾಯ ಮಾಡುವಂತೆ ಅವನು ದೇವರಿಗೆ ಕೈಮುಗಿದ. ಆಗ ಬಲೆಯಲ್ಲಿ ಒಂದು ಮುತ್ತಿನ ಚಿಪ್ಪು ಸಿಕ್ಕಿತು. ಅದನ್ನು ಒಡೆದಾಗ ಒಳಗೆ ಗುಲಾಬಿ ವರ್ಣದ ಬೆಲೆ ಬಾಳುವ ಮುತ್ತು ಇತ್ತು. ವರ್ತಕರ ಬಳಿಗೆ ಅದನ್ನು ಕೊಂಡುಹೋದಾಗ ಅವರು, ‘ಇಂಥ ಅಮೂಲ್ಯವಾದ ಮುತ್ತನ್ನು ನಾವು ಈ ವರೆಗೆ ನೋಡಿಲ್ಲ. ಇದರ ಬೆಲೆ ಕಟ್ಟಲಾರೆವು. ಆದರೂ ಒಂದು ಮೂಟೆ ತುಂಬ ಚಿನ್ನದ ಗಟ್ಟಿಗಳನ್ನು ಕೊಡುತ್ತೇವೆ. ತೆಗೆದುಕೊಂಡು ಹೋಗು’ ಎಂದು ಕೊಟ್ಟು ಕಳುಹಿಸಿದರು. ಮೀನುಗಾರ ಅದನ್ನು ಹೊತ್ತುಕೊಂಡು ಮನೆಗೆ ಬಂದ.

ಚಿನ್ನದ ಗಟ್ಟಿಗಳಿವೆಯೆಂದು ವಿಶ್ವಾಸದಲ್ಲಿ ಮೀನುಗಾರ ಮಗಳಿಗೆ ಒಳ್ಳೆಯ ಸಂಬಂಧ ನೋಡಿ ಮದುವೆ ನಿಶ್ಚಯ ಮಾಡಿದ. ಆದರೆ ಮದುವೆಗೆ ದಿನ ಸನ್ನಿಹಿತವಾಗಿರುವಾಗ ನೋಡಿದರೆ ಚಿನ್ನವನ್ನೆಲ್ಲ ಕಳ್ಳರು ಅಪಹರಿಸಿರುವುದು ಅವನ ಗಮನಕ್ಕೆ ಬಂತು. ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಿತೆಂದು ಗೋಳಾಡಿದ. ನಿರ್ಧರಿಸಿದ ಮದುವೆ ನಿಲ್ಲಬಾರದೆಂದು ತುಂಬ ಪ್ರಯತ್ನಿಸಿದ. ಆದರೆ ಬಡವನಾದ ಅವನಿಗೆ ಯಾರೂ ಧನಸಹಾಯ ಮಾಡಲಿಲ್ಲ. ಕಡೆಗೆ ವಿಧಿಯಿಲ್ಲದೆ ಮೋಸಗಾರನೆಂದು ಗೊತ್ತಿದ್ದರೂ ವ್ಯಾಪಾರಿಯ ಬಳಿಗೆ ಬಂದು ತನಗೆ ಮುತ್ತು ಸಿಕ್ಕಿದ ವಿಷಯವನ್ನು, ಕಳ್ಳರು ಚಿನ್ನವನ್ನು ಅಪಹರಿಸಿದುದನ್ನು ಒಂದೂ ಬಿಡದೆ ಹೇಳಿದ. ಮಗಳ ಮದುವೆಗೆ ಹಣದ ನೆರವು ನೀಡಿ ಮದುವೆಯನ್ನು ನಡೆಸಿಕೊಡಬೇಕೆಂದು ಪ್ರಾರ್ಥಿಸಿದ.

ಇದನ್ನು ಕೇಳಿ ವ್ಯಾಪಾರಿಯ ನಾಲಿಗೆಯಲ್ಲಿ ನೀರೂರಿತು. ‘ಹಣ ಕೊಡುತ್ತೇನೆ. ಆದರೆ ಒಂದು ಷರತ್ತಿಗೆ ನೀನು ಒಪ್ಪಬೇಕು. ನಾಳೆಯಿಂದ ನಿನಗೆ ಬಲೆಯಲ್ಲಿ ಮೀನಿನ ಹೊರತು ಇನ್ನೇನು ಸಿಕ್ಕಿದರೂ ನನಗೇ ತಂದುಕೊಡಬೇಕು. ನಾನು ನನ್ನ ಹಣ ಮರಳಿ ಬಂದಿತೆಂದು ಒಪ್ಪಿಕೊಳ್ಳುವ ತನಕ ನಿನ್ನ ಮಗಳನ್ನು ಗಂಡನ ಜೊತೆಗೆ ಕಳುಹಿಸಬಾರದು, ಆಗಬಹುದೆ?’ ಎಂದು ಕೇಳಿದ. ಒಮ್ಮೆ ಮದುವೆ ನಡೆದರೆ ಸಾಕು ಎಂದುಕೊಂಡಿದ್ದ ಮೀನುಗಾರ ಅವನ ಎಲ್ಲ ಷರತ್ತುಗಳಿಗೂ ಒಪ್ಪಿಕೊಂಡ. ವ್ಯಾಪಾರಿ ಕೊಟ್ಟ ಹಣದಲ್ಲಿ ಮದುವೆ ಮುಗಿಸಿದ. ಮದುವೆ ಮುಗಿಯುತ್ತಲೇ ವ್ಯಾಪಾರಿ ಅವನ ಮನೆಗೇ ಬಂದ. ಮದುಮಗಳನ್ನು ತನ್ನ ಮನೆಗೆ ಕರೆತಂದ. ಅವನ ಸಾಲ ಮುಗಿಯುವ ತನಕ ತನ್ನ ಮಗಳಿಗೆ ವಿಮೋಚನೆಯಿಲ್ಲ ಎಂಬುದು ಮೀನುಗಾರನಿಗೆ ಖಚಿತವಾಯಿತು.



ದೇವರನ್ನೇ ಪ್ರಾರ್ಥಿಸಿಕೊಂಡು ಮೀನುಗಾರ ಬಲೆ ತೆಗೆದುಕೊಂಡು ಮೀನು ಹಿಡಿಯಲು ಹೋದ. ಬಲೆ ಬೀಸಿದ ಕೂಡಲೇ ಭಾರವಾದ ಒಂದು ವಸ್ತು ಅದರಲ್ಲಿ ಸಿಲುಕಿತು. ತೆಗೆದು ನೋಡಿದರೆ ಅದು ಮಾಗಿ ಬಿರಿದ ಒಂದು ದಾಳಿಂಬೆಯ ಹಣ್ಣು. ಅದರೊಳಗೆ ಕೆಂಪು ರತ್ನಗಳು ತುಂಬಿರುವಂತೆ ಕಾಣಿಸಿತು. ವ್ಯಾಪಾರಿಗಳಿಗೆ ಅದನ್ನು ತೆಗೆದುಕೊಂಡು ಹೋಗಿ ತೋರಿಸಿದಾಗ ಅವರು, ‘ಇದು ಬೆಲೆ ಕಟ್ಟಲು ಸಾಧ್ಯವೇ ಇಲ್ಲದ ನಿಧಿ’ ಎಂದು ಹೇಳಿಬಿಟ್ಟರು. ಮೀನುಗಾರ ಸಂತೋಷದಿಂದ ಅದನ್ನು ತಂದು ವ್ಯಾಪಾರಿಗೆ ಒಪ್ಪಿಸಿ, ‘ನನ್ನ